ಅಸಲು ದಾವಾ ನಂ. 272/2022
ಪಿ ಡಬ್ಲು-1

ದಿನಾಂಕಃ 19-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ. ಎಸ್ ಜಿ ಹೆಚ್ ವಕೀಲರಿಂದ.**

ನಾನು ದತ್ತಕ ಹೋಗಿರುವುದಾಗಿ ಹೇಳಿದ್ದು ಅದಕ್ಕಿಂತ ಪೂರ್ವದಲ್ಲಿಯೇ ಆಸ್ತಿಗಳು ಇದ್ದವು ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಹೇಳಿದ ವಂಶಾವಳಿಯನ್ನು ದತ್ತಕ ಪತ್ರದ ಆಧಾರದ ಮೇಲಿಂದ ಬರೆದಿರುತ್ತೇನೆ. ನಾನು ದತ್ತಕ ಹೋಗಿರುವುದಾಗಿ ಹೇಳಿದ್ದು ಅದಕ್ಕಿಂತಲೂ ಹಿಂದಿನ ಸಂಗತಿಗಳ ಮಾಹಿತಿ ಗೊತ್ತಿಲ್ಲ ಎಂದರೆ ಸರಿ. ಫಕ್ಕೀರಪ್ಪ ಬಿನ್ ಮಾಯಪ್ಪ ಮತ್ತು ಮಾಯಪ್ಪ ಬಿನ್ ಮಾಯಪ್ಪ ಎಂಬುವವರು ಒಬ್ಬರೇ ವ್ಯಕ್ತಿ ಇರುತ್ತಾರೆ. ಹಾಗೇ ಒಬ್ಬನೇ ವ್ಯಕ್ತಿ ಎಂದು ಹೇಳಲು ನನ್ನ ಬಳಿ ಯಾವುದೇ ಸಬೂಬು ಆಧಾರ ಇಲ್ಲ. ತಿರಕಪ್ಪ ಮತ್ತು ಆತನ ಸಹೋದರರು ಮಾಡಿಕೊಂಡಿದ್ದಾರೆ ಎನ್ನಲಾದ ವಾಟ್ನಿಯ ಬಗ್ಗೆ ನನಗೆ ಗೊತ್ತಿಲ್ಲ. ಮಾಯಪ್ಪ ಎಂಬ ವ್ಯಕ್ತಿ ನಮ್ಮ ಘರಾಣೆಯಲ್ಲಿ ಇರಲಿಲ್ಲ. ದಾವಾದ ಆಸ್ತಿಗಳು ನನ್ನವು ಎಂದು ಹೇಳುತ್ತಿದ್ದು ತಿರಕಪ್ಪ ಮತ್ತು ಫಕ್ಕೀರಪ್ಪ ಇವರ ಮಧ್ಯೆ ಆದ ವಾಟ್ನಿಯ ಸಂಗತಿಯನ್ನು ತಿಳಿದುಕೊಂಡಿಲ್ಲ. ಈ ಹಿಂದಿನಿಂದಲೂ ದಾವಾದ ಆಸ್ತಿ ಸರ್ವೇ ನಂ.32/ಅ ಪಹಣಿಗೆ ಪ್ರತಿವಾದಿಯರ ಹೆಸರು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಹೆಸರು ಸರ್ವೇ ನಂ.32/3 ಬ ಆಸ್ತಿಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಮನೆಯ ಆಸ್ತಿಗಳಿಗೆ ಸಂಬಂಧಿಸಿದಂತೆ ಕೆಲವೊಂದು ಆಸ್ತಿಗಳು ನನ್ನ ಹೆಸರಿಗೆ ಮತ್ತು ಇನ್ನೂಳಿದ ಆಸ್ತಿಗಳು ಪ್ರತಿವಾದಿಯರ ಹೆಸರಿಗೆ ನಮೂದು ಇರುತ್ತವೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯರ ಘರಾಣೇದ ಬಗ್ಗೆ ಹಾಗೂ ನನ್ನ ಘರಾಣೇದ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಾಯಪ್ಪ ಇವರು 1919 ರಲ್ಲಿ ತೀರಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಫಕ್ಕೀರಪ್ಪ ಮಾಯಪ್ಪ ಮಾದರ ಇವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಫಕ್ಕಿರಪ್ಪನಿಗೆ ಮಕ್ಕಳು ಇದ್ದ ಬಗ್ಗೆ ನಾನು ತಿಳಿದುಕೊಂಡಿಲ್ಲ. ಅವರಿಗೆ ಮಕ್ಕಳು ಇರಲಿಲ್ಲ. ಫಕ್ಕೀರಪ್ಪ ಇವರಿಗೆ ದ್ಯಾಮಪ್ಪ ಮತ್ತು ಮಾಯಪ್ಪ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಮಾಯಪ್ಪನಿಗೆ ದುರಗಪ್ಪ ಮತ್ತು ಕರಿಯಪ್ಪ ಎಂಬ ಮಕ್ಕಳು ಎಂದರೆ ಸರಿಯಲ್ಲ. ಕರಿಯಪ್ಪನ ಹೆಂಡತಿಯ

ಹೆಸರು ನಿಂಗವ್ವ ಮತ್ತು ಅವರಿಗೆ ಪ್ರತಿವಾದಿ ನಂ.11 ರಿಂದ 14 ಮಕ್ಕಳು ಎಂದರೆ ಸರಿಯಲ್ಲ. ನಾನು ಕರಿಯಪ್ಪ ಮಾಯಪ್ಪ ಮಾದರ ಇವರ ಶಾಲಾ ದಾಖಲೆ ಹಾಜರುಪಡಿಸಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ತಿರಕಪ್ಪ ಇವರು ಈ ಹಿಂದೆ ನ್ಯಾಯಾಲಯದಲ್ಲಿ ದಾವೆ ಹೂಡಿರಲಿಲ್ಲ. ನಾನು ದತ್ತಕ ಹೋಗಿರುವುದಾಗಿ ಹೇಳಿದ್ದು, ಆ ದಿನಾಂಕದಂದು ದಾವಾ ಆಸ್ತಿಗಳ ಉತಾರೆಗಳನ್ನು ನಾನು ನೋಡಿಲ್ಲ. ದಾವಾದ ಆಸ್ತಿ ನನ್ನದು ಎಂಬುವುದು ನಾನು ವಯಸ್ಕನಾದಾಗ ಗೊತ್ತಾಗಿರುತ್ತದೆ. ದತ್ತಕ ಆದಾಗ ನನಗೆ 16 ವರ್ಷ ವಯಸ್ಸಾಗಿರುವುದಾಗಿ ಹೇಳಿದ್ದು ಆಗ ನನಗೆ ಈ ಸಂಗತಿ ಗೊತ್ತಾಗಿರುತ್ತದೆ ಎಂದರೆ ಸರಿ. ನನಗೆ ಆಗಿನಿಂದಲೂ ವಿಷಯ ಗೊತ್ತಾದಾಗ ಇಲ್ಲಿಯವರೆಗೂ ನಾನು ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ಸರ್ವೇ ನಂ.32/ಎ ಆಸ್ತಿಯು ಪ್ರತಿವಾದಿಯರ ಘರಾಣೆಕ್ಕೆ ಸಂಬಂಧಿಸಿದ ಆಸ್ತಿ ಇದ್ದು ಅದನ್ನು ಎತ್ತಿ ಹಾಕುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ನಂ.45 ರಲ್ಲಿಯೂ ಸಹ ನನಗೆ ಮತ್ತು ಪ್ರತಿವಾದಿಯರಿಗೆ ಅರ್ಧ ಅರ್ಧ ಹಿಸ್ಸೇ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಮೇಲೆ ಕೆಳ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರಿಂದ ನಾನು ಈ ನ್ಯಾಯಾಲಯದಲ್ಲಿ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 2020 ನೇ ಇಸ್ವಿಯಿಂದ ಪ್ರತಿವಾದಿಯರ ಮೇಲೆ ಕ್ರಿಮಿನಲ್ ಮೊಕದ್ದಮೆ ಸಲ್ಲಿಸುತ್ತಾ ಬಂದಿರುತ್ತೇನೆ ಎಂದರೆ ಸರಿ. ಸಾಕ್ಷಿ ಅವರು ನನಗೆ ಹರಕತ್ತು ಮಾಡಿದ್ದರಿಂದ ಮೊಕದ್ದಮೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಕ್ರಿಮಿನಲ್ ಮೊಕದ್ದಮೆಗಳನ್ನು ಸರ್ವೇ ನಂ.32/ಎ, 42 ಆಸ್ತಿಯ ಅರ್ಧ ಹಿಸ್ಸೇ ಸ್ವಾಧೀನತೆ ನೀಡುವಂತೆ ಪ್ರತಿವಾದಿಯ ಮೇಲೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಸಂಪೂರ್ಣವಾಗಿ ತಿರಕಪ್ಪನಿಗೆ ಸಂಬಂಧಿಸಿದ್ದು ಅಲ್ಲ, ಅವನ ಸಹೋದರರಿಗೂ ಸಂಬಂಧಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಕಾಗದ ಪತ್ರಗಳು ತಿರಕಪ್ಪನ ಸಹೋದರರಾದ ಫಕ್ಕೀರಪ್ಪ ಮತ್ತು ಮಾಯಪ್ಪ ಇವರಿಗೂ ಸಂಬಂಧಿಸಿದ ಆಸ್ತಿಗಳು ಎಂದು ತೋರಿಸುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಯರ

ಮೇಲೆ ಹಗೆತನ ಸಾಧಿಸುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ವಂಶಾವಳಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದು ನನ್ನ ಕಲ್ಪನೆಯ ವಂಶಾವಳಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ  ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).